**ಚಾಸಾ-15 ಪ್ರಾಸಾ-8**

**3ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿಸಿ. 5722/2008**

**ಚಾಸಾ-15 ಪ್ರಾಸಾ- 8**

| | |
|---|---|
| **ಸಾಕ್ಷಿದಾರರ ಹೆಸರು** | ಬಸಪ್ಪ ಕೋರಿ ಶೆಟ್ಟರ್ |
| **ತಂದೆಯ ಹೆಸರು** | ಮರ ಬಸಪ್ಪ |
| **ವಯಸ್ಸು** | 73 ವರ್ಷ |
| **ಉದ್ಯೋಗ** | ನಿವೃತ್ತ ಎ.ಎಸ್.ಐ |
| **ವಾಸ** | ಬ್ಯಾಡಗಿ, ಹಾವೇರಿ ಜಿಲ್ಲೆ. |
| **ಪ್ರಮಾಣೀಕರಿಸಿದ ದಿನಾಂಕ** | 13.05.2024. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು 2001 ರಿಂದ 2007 ರವರೆಗೆ ಎಸ್.ಜೆ . ಪೊಲೀಸ್ ಠಾಣೆಯಲ್ಲಿ ಎ.ಎಸ್ ಐ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ದಿ.19.04.2006 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ದೂರುದಾರರು 14.30 ಗಂಟೆಗೆ ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ಸಂಖ್ಯೆಃ52/2006 ರಂತೆ ಕಲಂ.468, 471, 408, 420 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲು ಮಾಡಿ ಪ್ರ.ವ.ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

2. ಈಗ ನೋಡುತ್ತಿರುವ ದಾಖಲೆ ನಾನು ಸ್ವೀಕರಿಸಿದ ದೂರು ಆಗಿದ್ದು, ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ದಾಖಲೆ ನಾನು ದಾಖಲಿಸಿದ ಪ್ರ.ವ.ವರದಿಯಾಗಿದ್ದು, ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.28 ಎಂದು, ಸಾಕ್ಷಿ ಸಹಿಯನ್ನು ನಿಪಿ.28(ಎ) ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ -17 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲು : ಶ್ರೀ. ಸಿ ಎನ್ ಡಿ ವಕೀಲರಿಂದ ಆರೋಪಿ ಪರ**

ದೂರುದಾರರು ದೂರನ್ನು ಮೊದಲೇ ತಯಾರಿಸಿಕೊಂಡು ತೆಗೆದುಕೊಂಡು ಬಂದಿದ್ದರು. ಅಮರ್ ರೆಹಮಾನ್ ಮಾತ್ರ ದೂರು ನೀಡಲು ಠಾಣೆಗೆ ಬಂದಿದ್ದರು. ದೂರಿನಲ್ಲಿ ದಿ.07.04.2006 ಅಂತ ದಿನಾಂಕ ನಮೂದಿಸಲಾಗಿದೆ ಎಂದರೆ ನನಗೆ ಕೊಟ್ಟಿದ್ದು ದಿ.19.04.2006 ರಂದು. ದಿ.07.04.2006 ರಂದು ದೂರಿನಲ್ಲಿ ಬರೆದಿದ್ದರು ಸಹ ಏಕೆ ತಡ ಮಾಡಿರುತ್ತೀರಿ ಎಂದು ನಾನು ಕೇಳಿಲ್ಲ, ದೂರನ್ನು ಪಡೆದುಕೊಂಡು ಎಫ್ ಐ ಆರ್ ದಾಖಲು

**ಚಾಸಾ-15 ಪ್ರಾಸಾ-8**

ಮಾಡಿರುತ್ತೇನೆ. ದೂರು ಓದಿರುತ್ತೇನೆ. ದೂರಿನಲ್ಲಿ ದಿ.01.04.2004 ರಿಂದ ದಿ.18.04.2006 ರವರೆಗೆ ಸದರಿ ಘಟನೆಯಾಗಿರುತ್ತದೆ ಎಂದು ಗೊತ್ತಾಗುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಅಂದರೆ ದಿ.01.04.2004 ರಿಂದ ದಿ.18.04.2006 ರವರೆಗೆ ದೂರು ನೀಡಿಲ್ಲ, ದಿ.19.04.2006 ರಂದು ನೀಡಿರುತ್ತಾರೆ. ದೂರಿನೊಂದಿಗೆ ಯಾವುದೇ ದಾಖಲಾತಿಯನ್ನು ನೀಡಿಲ್ಲ. ಆರೋಪಿ ದೂರುದಾರರ ಕಂಪನಿಯಲ್ಲಿ ಆಪ್ತ ಸಹಾಯಕಿ ಅಂತ ಕೆಲಸ ಮಾಡುತ್ತಿದ್ದರು ಎಂದು ಹೇಳಿರುತ್ತಾರೆ. ಈ ದೂರು ದಾಖಲಿಸುವ ಮೊದಲು ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಸದರಿ ಆರೋಪಿಯ ವಿರುದ್ಧ ದೂರುದಾರರು ಮತ್ತು ಅವರ ಹೆಂಡತಿ ಒಂದು ದೂರನ್ನು ಸಲ್ಲಿಸಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಎಮ್.ಎಮ್.ನ್ಯಾ.**
**ಬೆಂಗಳೂರು.**

**ಚಾಸಾ-15 ಪ್ರಾಸಾ-8**